ANANTHKUMAR PRATISHTHANA

# ಅನಂತಪಥ

ಪುಟ 4
ಅನಂತ ನೆನಪು
ಶ್ರೀ ಬಿ ಎಸ್ ಯಡಿಯೂರಪ್ಪ




ಸಂಪುಟ - 6 ಏಪ್ರಿಲ್- 2026 ಸಂಚಿಕೆ - 70

# ವಿಶ್ವಸಂಸ್ಥೆಯಲ್ಲಿ ಮೊಳಗಿದ ಅನಂತ ಧ್ವನಿ: ಸ್ತ್ರೀಶಕ್ತಿಯ ಜಾಗತಿಕ ರಾಯಭಾರಿ

ಭಾರತದ ಸಂಸತ್ತಿನ ಇತಿಹಾಸದಲ್ಲಿ 'ನಾರಿ ಶಕ್ತಿ ವಂದನ್ ಅಧಿನಿಯಮ'ವು ಒಂದು ಮೈಲಿಗಲ್ಲಾದರೂ, ಅದರ ಅನುಷ್ಠಾನವು ಇಂದಿಗೂ ಆಡಳಿತಾತ್ಮಕ ಜಟಿಲತೆಗಳ ನಡುವೆ ದಾರಿ ಕಾಣದೆ ನಿಂತಿದೆ. 2023ರಲ್ಲಿ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಈ ವಿಧೇಯಕಕ್ಕೆ ಒಪ್ಪಿಗೆ ಸಿಕ್ಕಿದ್ದರೂ, ಇದನ್ನು ಜಾರಿಗೆ ತರುವ ವಿಷಯದಲ್ಲಿ ಪ್ರತಿಪಕ್ಷಗಳ ನಡುವಿನ ಸಹಮತದ ಕೊರತೆ ಮತ್ತು ಕ್ಷೇತ್ರ ಪುನರ್ ವಿಂಗಡಣೆಯಂತಹ ಸಂಕೀರ್ಣ ಪ್ರಕ್ರಿಯೆಗಳು ಮೀಸಲಾತಿಯನ್ನು ಸದ್ಯದ ಮಟ್ಟಿಗೆ ಕೇವಲ ಘೋಷಣೆಗೆ ಸೀಮಿತಗೊಳಿಸಿವೆ. ಈ ಹೊತ್ತಿನಲ್ಲಿ, 2012ರಲ್ಲೇ ವಿಶ್ವಸಂಸ್ಥೆಯ ವೇದಿಕೆಯಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ಭಾರತದ ಬದ್ಧತೆಯನ್ನು ಸಾರಿದ್ದ ದಿವಂಗತ ಅನಂತಕುಮಾರ್ ಅವರ ಮಾತುಗಳು ಮತ್ತು ಅಂದು ಅವರು ತೋರುತ್ತಿದ್ದ ರಾಜಕೀಯ ಸಂಯಮ ಇಂದು ಮತ್ತೊಮ್ಮೆ ನೆನಪಾಗುತ್ತಿದೆ.



**ವಿಶ್ವಸಂಸ್ಥೆಯ ವೇದಿಕೆಯಲ್ಲಿ ಅನಂತ ಧ್ವನಿ:** ಅಕ್ಟೋಬರ್ 2012ರಲ್ಲಿ ವಿಶ್ವಸಂಸ್ಥೆಯ 67ನೇ ಸಾಮಾನ್ಯ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಅನಂತಕುಮಾರ್ ಅವರು, "Advancement of Women" (ಮಹಿಳೆಯರ ಅಭಿವೃದ್ಧಿ) ಎಂಬ ವಿಷಯದ ಕುರಿತು ಮಾತನಾಡುತ್ತಾ, ಮಹಿಳಾ ಸಬಲೀಕರಣದಲ್ಲಿ ಭಾರತವು ಜಗತ್ತಿಗೇ ಮಾದರಿಯಾಗಲಿದೆ ಎಂದು ದೃಢವಾಗಿ ನುಡಿದಿದ್ದರು. ಅಂದು ಅವರು ಪ್ರಸ್ತಾಪಿಸಿದ್ದು ಕೇವಲ ಅಂಕಿ-ಅಂಶಗಳನ್ನಲ್ಲ, ಬದಲಿಗೆ ಮಹಿಳೆಯರ ಘನತೆಯನ್ನು. 'ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಸ್ಥಾನಕ್ಕೆ ಬಂದಾಗ ಮಾತ್ರ ಸಮಾಜದ ಪ್ರಗತಿ ಸಾಧ್ಯ' ಎಂದು ಅವರು ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರತಿಪಾದಿಸಿದ್ದರು. ಭಾರತದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೀಡಲಾದ ಮೀಸಲಾತಿಯಿಂದಾಗಿ ಹಳ್ಳಿಗಳಲ್ಲಿ ಉಂಟಾದ ಸಾಮಾಜಿಕ ಕ್ರಾಂತಿಯನ್ನು ಅವರು ವಿಶ್ವದ ನಾಯಕರಿಗೆ ವಿವರಿಸಿದ್ದರು. 'ಸ್ಥಳೀಯ ಮಟ್ಟದಲ್ಲಿ ಯಶಸ್ವಿಯಾದ ಈ ಪ್ರಾತಿನಿಧ್ಯ ಮಾದರಿಯು ಉನ್ನತ ಶಾಸನಸಭೆಗಳಿಗೂ ವಿಸ್ತರಣೆಯಾಗಬೇಕು' ಎಂಬುದು ಅವರ ಅಂದಿನ ಬಲವಾದ ಪ್ರತಿಪಾದನೆಯಾಗಿತ್ತು.




> "ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಸ್ಥಾನಕ್ಕೆ ಬಂದಾಗ ಮಾತ್ರ ಸಮಾಜದ ಪ್ರಗತಿ ಸಾಧ್ಯ"
>
> _ಶ್ರೀ ಅನಂತಕುಮಾರ್

ಅವರು ಅಂದು ಕಂಡ ಆ ಕನಸು ಇಂದು ಸಂಸತ್ತಿನಲ್ಲಿ ವಿಧೇಯಕವಾಗಿ ಅಂಗೀಕಾರಗೊಂಡಿದ್ದರೂ, ಅದರ ಅನುಷ್ಠಾನದಲ್ಲಿ ಉಂಟಾಗಿರುವ ವಿಳಂಬವು ಅವರ ಆಶಯಗಳಿಗೆ ಸವಾಲೊಡ್ಡಿದಂತಿದೆ.

**ಘೋಷಣೆಯಿಂದ ಜಾರಿಯವರೆಗೆ:** ಅನಂತಕುಮಾರ್ ಅವರು ಕೇವಲ ಸಿದ್ಧಾಂತಗಳನ್ನು ಮಾತನಾಡಿದವರಲ್ಲ. ಅವರ ಸಚಿವಾಲಯದ ಮೂಲಕ ಜಾರಿಗೆ ಬಂದ 'ಸುವಿಧಾ' ಯೋಜನೆಯು ಗ್ರಾಮೀಣ ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಕ್ರಾಂತಿಕಾರಿಯಾಗಿತ್ತು. ವಿಶ್ವಸಂಸ್ಥೆಯಲ್ಲಿ ಅವರು ಯಾವುದರ ಬಗ್ಗೆ ಮಾತನಾಡಿದ್ದರೋ, ಅದನ್ನು ಭಾರತದ ಹಳ್ಳಿ ಹಳ್ಳಿಗಳಿಗೆ ತಲುಪಿಸುವ ಕೆಲಸ ಮಾಡಿದರು. ₹2.50 ಗೆ ಸ್ಯಾನಿಟರಿ ಪ್ಯಾಡ್ ನೀಡುವುದು ಕೇವಲ ಒಂದು ಯೋಜನೆಯಲ್ಲ, ಅದು ಮಹಿಳೆಯರ ಘನತೆಯನ್ನು ಎತ್ತಿಹಿಡಿಯುವ ಅವರ ಬದ್ಧತೆಯಾಗಿತ್ತು.

ಅದೇ ರೀತಿ, 'ಅದಮ್ಯ ಚೇತನ' ಸಂಸ್ಥೆಯ ಮೂಲಕ ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿಯನ್ನು ನೀಡಿ, ನೂರಾರು ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿದರು. ರಾಜಕೀಯ ಮೀಸಲಾತಿಯು ಕೇವಲ ಅಧಿಕಾರಕ್ಕಷ್ಟೇ ಸೀಮಿತವಾಗಬಾರದು; ಬದಲಿಗೆ, ಅದು ಮಹಿಳೆಯರ ಜೀವನಮಟ್ಟವನ್ನು ಸುಧಾರಿಸುವ ಪ್ರಬಲ 'ಅಸ್ತ್ರ'ವಾಗಬೇಕು ಎಂಬುದೇ ಅವರ ಅಚಲ ಆಶಯವಾಗಿತ್ತು.

**ಮುಂದಿನ ಹಾದಿ: ಸ್ತ್ರೀಶಕ್ತಿಯ ನವ ಸಂಕಲ್ಪ**

ಮಹಿಳಾ ಮೀಸಲಾತಿಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬವು ಸಮಾಜದಲ್ಲಿ ಒಂದು ರೀತಿಯ ಅತೃಪ್ತಿಯನ್ನು ಹುಟ್ಟುಹಾಕುತ್ತಿರುವುದು ನಿಜ. ಆದರೆ, ಈ ವಿಳಂಬವು ನಮ್ಮನ್ನು ಹತಾಶರನ್ನಾಗಿಸಬಾರದು. ಬದಲಿಗೆ, ಮಹಿಳೆಯರು ಕೇವಲ ಮೀಸಲಾತಿಯನ್ನು ಎದುರು ನೋಡುವ ಬದಲಿಗೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವೇ ಸಬಲರಾಗಿ ಬೆಳೆಯುವ ಮೂಲಕ ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವ ಕಾಲ ಇದು. ಅನಂತಕುಮಾರ್ ಅವರು ಸದಾ ಹೇಳುತ್ತಿದ್ದಂತೆ, 'ಅಧಿಕಾರ ಎನ್ನುವುದು ನೀಡುವ ವಸ್ತು ಅಲ್ಲ, ಅದು ಗಳಿಸಿಕೊಳ್ಳುವ ಶಕ್ತಿ'.



ಇಂದು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಂತಹ ನಾಯಕತ್ವದ ಮೂಲಕ 'ಅದಮ್ಯ ಚೇತನ'ವು ಮಾಡುತ್ತಿರುವ ಕೆಲಸಗಳು, ರಾಜಕೀಯ ಮೀಸಲಾತಿ ಇಲ್ಲದೆಯೇ ಮಹಿಳೆಯರು ಹೇಗೆ ಸಮಾಜವನ್ನು ಮುನ್ನಡೆಸಬಹುದು ಎಂಬುದಕ್ಕೆ ಜ್ವಲಂತ ಉದಾಹರಣೆಯಾಗಿದೆ. ಮೀಸಲಾತಿ ಬಂದಾಗ ಮಹಿಳೆಯರು ಅಧಿಕಾರಕ್ಕೆ ಬರುವುದಲ್ಲ, ಬದಲಿಗೆ ಅಧಿಕಾರವೇ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಅರ್ಥಪೂರ್ಣವಾಗುತ್ತದೆ.

ಮಹಿಳಾ ಮೀಸಲಾತಿಯ ಅನುಷ್ಠಾನವು ದಶಕಗಳ ಕನಸು. ಈ ಹಾದಿಯಲ್ಲಿರುವ ಅಡೆತಡೆಗಳು ತಾತ್ಕಾಲಿಕ, ಆದರೆ ಅನಂತಕುಮಾರ್ ಅವರ ದೂರದೃಷ್ಟಿ ಶಾಶ್ವತ. ಮಹಿಳೆ ಕೇವಲ ಮತದಾರಳಲ್ಲ, ಅವಳು ದೇಶದ ಭವಿಷ್ಯದ ದಾರಿದೀಪ ಎಂಬ ಅವರ ಆಶಯ, ಮುಂಬರುವ ದಿನಗಳಲ್ಲಿ ಸಂಸತ್ತಿನ ಅಂಗಳದಲ್ಲಿ ನಿಜವಾಗಲಿ. ●

# ರಾಷ್ಟ್ರ ನಿರ್ಮಾಣದ ಪಣ: ಹೆಗ್ಗನಹಳ್ಳಿಯಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಕನಸಿನ ಯೋಜನೆಗೆ ಭದ್ರ ಬುನಾದಿ



ಅನಂತಕುಮಾರ್ ಪ್ರತಿಷ್ಠಾನವು ಶ್ರೀ ಅನಂತಕುಮಾರ್ ಅವರ ಸ್ಮರಣಾರ್ಥ ಸ್ಥಾಪಿತವಾದ ಸಂಸ್ಥೆಯಾಗಿದ್ದು, ಅವರ ತತ್ವಗಳು ಮತ್ತು ರಾಷ್ಟ್ರ ನಿರ್ಮಾಣದ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಕ್ರಿಯವಾಗಿದೆ. ಅನಂತಕುಮಾರ್ ಪ್ರತಿಷ್ಠಾನವು ಯುವಜನತೆಯಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವುದು, ದೇಶಭಕ್ತಿ ಮತ್ತು ಸಮಾಜ ಸೇವೆಯ ಮನೋಭಾವವನ್ನು ಮೂಡಿಸುವುದು ಹಾಗೂ ಪರಿಸರ ಜಾಗೃತಿಯನ್ನು ಉತ್ತೇಜಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಉದ್ದೇಶಿತ ನಾಯಕತ್ವ ತರಬೇತಿ ಕೇಂದ್ರದ ಸ್ಥಾಪನೆಗೆ ಈಗಾಗಲೇ ಗಣನೀಯ ಪ್ರಗತಿ ಸಾಧಿಸಲಾಗಿದೆ.

ಅನಂತಕುಮಾರ್ ಅವರ ಆತ್ಮೀಯ ಸ್ನೇಹಿತರಾದ ಮಾಜಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು, ತಾವು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ, ಪ್ರತಿಷ್ಠಾನದ ಈ ರಚನಾತ್ಮಕ ಕಾರ್ಯಚಟುವಟಿಕೆಗಳಿಗಾಗಿ 20 ಕೋಟಿ ರೂಪಾಯಿಗಳ ಅನುದಾನವನ್ನು ಘೋಷಿಸುವ ಮೂಲಕ ಬಲವಾದ ಬೆಂಬಲ ನೀಡಿದ್ದರು. ಈ ಯೋಜನೆಯ ಅನುಷ್ಠಾನಕ್ಕಾಗಿ, ಶ್ರೀ ಅನಂತಕುಮಾರ್ ಅವರ ಆಪ್ತ ನಿಕಟವರ್ತಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಅನಂತಕುಮಾರ್ ಅವರ ಪೂರ್ವಜರ ಗ್ರಾಮವಾದ ಹೆಗ್ಗನಹಳ್ಳಿಯಲ್ಲಿ 3 ಎಕರೆ 10 ಗುಂಟೆ ಜಮೀನನ್ನು ಪ್ರತಿಷ್ಠಾನಕ್ಕೆ ಮಂಜೂರು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿ ಪ್ರೋತ್ಸಾಹಿಸಿದ್ದರು.

ಯೋಜನೆಯ ಆರಂಭಿಕ ಹಂತದಲ್ಲಿ ಸ್ಥಳೀಯ ಗ್ರಾಮಸ್ಥರಿಗೆ ಯೋಜನೆಯ ಉದ್ದೇಶಗಳ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದ ಕಾರಣ ಕೆಲ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ, ಪ್ರತಿಷ್ಠಾನದ ಪದಾಧಿಕಾರಿಗಳು ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿ, ನಮ್ಮ ಉದ್ದೇಶಿತ ಚಟುವಟಿಕೆಗಳು ಹೇಗೆ ಗ್ರಾಮದ ಅಭಿವೃದ್ಧಿಗೂ ಪೂರಕವಾಗಿರಲಿವೆ ಎಂಬುದನ್ನು ಮನವರಿಕೆ ಮಾಡಿದರು.

ಈ ಪ್ರಕ್ರಿಯೆಯ ಭಾಗವಾಗಿ, ಗ್ರಾಮಸ್ಥರು 'ಅದಮ್ಯ ಚೇತನ' ಸಂಸ್ಥೆಗೆ ಭೇಟಿ ನೀಡಿ ಅಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿದರು. ಸಂಸ್ಥೆಯ ಸಾಮಾಜಿಕ ಬದ್ಧತೆಯಿಂದ ಪ್ರಭಾವಿತರಾದ ಗ್ರಾಮಸ್ಥರು, ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ, ದೇಶಾದ್ಯಂತ 'ಅನಂತ ಪ್ರೇರಣಾ ವೇದಿಕೆ'ಯ ಮೂಲಕ ಈ ಚಟುವಟಿಕೆಗಳನ್ನು ವಿಸ್ತರಿಸುವಲ್ಲಿ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ.

ಏಪ್ರಿಲ್ 11, 2026 ರಂದು ಹೆಗ್ಗನಹಳ್ಳಿಯಲ್ಲಿ ಆಯೋಜಿಸಲಾದ ವಿಶೇಷ ಕಾರ್ಯಕ್ರಮದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣ ಭಟ್ ಮತ್ತು ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಪ್ರತಿಷ್ಠಾನದ ಪದಾಧಿಕಾರಿಗಳನ್ನು ಮಂಗಳವಾದ್ಯದೊಂದಿಗೆ ಸ್ವಾಗತಿಸಿ, ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯರಾದ ಶ್ರೀ ಗೋಪಿನಾಥ್, ಶ್ರೀ ಅಶ್ವತ್ಥ್ ನಾರಾಯಣ, ಶ್ರೀ ಬಸವರಾಜ್, ಸಂಸ್ಥೆಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ಪ್ರದೀಪ್ ಓಕ್, ಜಿ. ನಾಗೇಂದ್ರ, ಮತ್ತು ಶ್ರೀ ಜಿ. ಎಂ. ಇನಾಂದಾರ್, ಸುಧಾಂಶು ಕಿಲ್ಲೆದಾರ್, ಸೀಮಾ ಕಿಲ್ಲೆದಾರ್, ಪ್ರಾಂಜಲಿ, ಶ್ರೀಮತಿ ಪ್ರತಿಭಾ ಓಕ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.



ಈಗಾಗಲೇ 'ಅದಮ್ಯ ಚೇತನ'ದ ಕಾರ್ಯಕರ್ತರ ತಂಡವು ಗ್ರಾಮದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತಾದ ಸಮಗ್ರ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಆರಂಭಿಸಿದೆ. ಈ ಯೋಜನೆಯ ಭಾಗವಾಗಿ, ಗ್ರಾಮದಲ್ಲಿ ಮೊದಲನೆಯದಾಗಿ 'ನಿತ್ಯ ಅನ್ನದಾನ' ಯೋಜನೆಯನ್ನು ಜಾರಿಗೊಳಿಸಲು ಸಂಸ್ಥೆಯು ಸಿದ್ಧತೆಗಳನ್ನು ನಡೆಸುತ್ತಿದೆ.

## ಹಸಿರು ಭಾನುವಾರ





**ಅದಮ್ಯ ಚೇತನದ 'ಹಸಿರು ಭಾನುವಾರ' ಕಾರ್ಯಕ್ರಮವು ವಿವಿಧೆಡೆ ಯಶಸ್ವಿಯಾಗಿ ನಡೆಯುತ್ತಿದ್ದು , ಇದರಲ್ಲಿ ಜನರು ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.**

ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಸಂಘಟನೆಯ ಚಟುವಟಿಕೆ

ಸ್ಥಾನಮಾನಗಳಿಗಾಗಿ ಹೊಡೆದಾಟ ಬಡಿದಾಟಗಳೇನೂ ಇಲ್ಲದ ಕಾಲ ಅದು. ವಿದ್ಯಾರ್ಥಿಪರಿಷತ್ತಿನ ಅಧ್ಯಕ್ಷ, ಕಾರ್ಯದರ್ಶಿ ಹುದ್ದೆಗಳಿರಲಿ, ವಿಧಾನಸಭಾ ಸದಸ್ಯಸ್ಥಾನದ ಚುನಾವಣೆಗೂ ಪಕ್ಷದಿಂದ ಯಾರು ಸ್ಪರ್ಧಿಸಬೇಕೆನ್ನುವುದು ಬಲು ಸುಲಭವಾಗಿ ನಿರ್ಣಯವಾಗಿ ಬಿಡುತ್ತಿತ್ತು. ಬೆಂಬಲಿಗರನ್ನು ಕರೆದುಕೊಂಡು ಬರುವುದು, ಲಾಬಿ ಮಾಡುವುದು, ಹೈಕಮಾಂಡ್ ಮತ್ತೊಂದು ಏನೂ ಇಲ್ಲ. ಗದಗ ಕ್ಷೇತ್ರದಿಂದ ಮೆಣಸಿನಕಾಯಿ ಮಾಸ್ತರ್ ನಿಲ್ಲುತ್ತಾರೆಯೇ? ಸರಿ. ಪಕ್ಷದವರು ಯಾರೂ ಗೆಲ್ಲುವುದಿಲ್ಲ ಎನ್ನುವುದಂತೂ ನಿಜ. ಆದರೆ, ಸ್ಪರ್ಧೆ ಮುಖ್ಯ, ಸ್ಪರ್ಧೆಯ ಮೂಲಕ ಪಕ್ಷದ ಸಿದ್ಧಾಂತಗಳ ಪ್ರಚಾರ ಮುಖ್ಯ, ಅಷ್ಟೇ.


ಪಕ್ಷದಲ್ಲಿ ಹೇಗೋ ಹಾಗೆ ವಿದ್ಯಾರ್ಥಿಪರಿಷತ್ತಿನಲ್ಲೂ ಅಧಿಕಾರಕ್ಕಾಗಿ ಹಂಬಲಿಕೆಯ ಪ್ರವೃತ್ತಿಯೇ ಇಲ್ಲ. ಅಧಿಕಾರ ಎನ್ನುವುದು ಒಂದು ಜವಾಬ್ದಾರಿ. ಈ ಸಲ ಹುಬ್ಬಳ್ಳಿಯ ವಿಭಾಗಕ್ಕೆ ಯಾರು ಕಾರ್ಯದರ್ಶಿಯಾಗಬೇಕು? ಇರುವ ಸದಸ್ಯರಲ್ಲಿ ನೀನು ಕಾರ್ಯದರ್ಶಿಯಾಗು ಎಂದು ಒಬ್ಬರ ಹೆಸರು ಸೂಚಿಸಿದರೆ ಆಯಿತು. ಮತ್ತೊಬ್ಬ ಜಂಟಿ ಕಾರ್ಯದರ್ಶಿ. ಗುಡ್ಡು ಇನಾಂದಾರ್ ಕಾರ್ಯದರ್ಶಿಯಾಗಿದ್ದೂ ಹೀಗೆಯೇ. ಜೊತೆಗಿದ್ದ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಅನಂತಕುಮಾರ್ ಜಂಟಿ ಕಾರ್ಯದರ್ಶಿ.

ಅಧ್ಯಕ್ಷನಾಗಿರಲಿ, ಕಾರ್ಯದರ್ಶಿಯಾಗಿರಲಿ ಪರಿಷತ್ತಿನ ಕಾರ್ಯಚಟುವಟಿಕೆಗಳ ಪ್ರತಿ ಹೆಜ್ಜೆಯನ್ನೂ ಅವರವರೇ ನಿರ್ಧರಿಸಿ ಗುರುತಿಸುವ ಪರಿಸ್ಥಿತಿಯೊದಗಿತ್ತು. ತುರ್ತುಪರಿಸ್ಥಿತಿ ಘೋಷಣೆಯಾಗಿ ತೆರವಾಗುವವರೆಗೆ ಪರಿಷತ್ತಿನ ಕಾರ್ಯ ನಿಷ್ಕ್ರಿಯವಾಗಿತ್ತಲ್ಲ. ಇನ್ನು ಈಗ ಖಾಲಿ ತಟ್ಟೆಯಿಟ್ಟುಕೊಂಡು ಅಡುಗೆಗೆ ಹೊರಟ ಹಾಗೆ. ಹೋದ ಸಲ ಇಂಥ ಕಾರ್ಯಕ್ರಮ ಆಗಿತ್ತು, ಇಂತಹವರೆಲ್ಲ ಸೇರಿದ್ದರು, ಕಾರ್ಯಕ್ರಮ ಹೀಗೆ ನಡೆದಿತ್ತು ಅನ್ನುವುದಕ್ಕೆ ಯಾವ ಹಿನ್ನೆಲೆಯೂ ಇಲ್ಲವೇ ಇಲ್ಲ. ಎಲ್ಲ ಮೊದಲಿನಿಂದ ಪ್ರಾರಂಭ ಕಾಣಬೇಕು.

ಯಾವ ಕಾರ್ಯಕ್ರಮ ಮಾಡುವುದು, ಯಾರನ್ನು ಸೇರಿಸುವುದು ಎಲ್ಲ ರೂಪರೇಶೆ ಇವರೇ ಸಿದ್ಧಮಾಡಿಕೊಳ್ಳಬೇಕು. ಇಂಥ ಕಾಲೇಜಿನಲ್ಲಿ ಹೀಗೊಂದು ವಿವೇಕಾನಂದ ಜಯಂತಿ ಮಾಡೋಣ, ಸರಿ. ಕಾರ್ಯಕ್ರಮಕ್ಕೆ ಕುರ್ಚಿ ತಂದುಹಾಕುವುದು, ಮೈಕ್ ಜೋಡಿಸುವುದರಿಂದ ಹಿಡಿದು ಹುಡುಗರನ್ನು ಗುಂಪು ಸೇರಿಸಿ, ಅತಿಥಿಗಳನ್ನು ಕರೆಸಿ ಭಾಷಣ ಮಾಡಿಯಾದ ಮೇಲೆ ಕುರ್ಚಿಗಳನ್ನು ಎತ್ತಿಕೊಂಡು ಹೋಗುವವರೆಗೆ ಇವರದೇ ಕೆಲಸ. ಆಮೇಲೆ ಪತ್ರಿಕಾ ಹೇಳಿಕೆ ಸಿದ್ಧಪಡಿಸಿ, ಅಧ್ಯಕ್ಷರು ಹೀಗೆ ಹೇಳಿದರು, ಕಾರ್ಯದರ್ಶಿ ಸ್ವಾಗತಿಸಿದರು ಎಲ್ಲವನ್ನೂ ಬರೆದು ಪತ್ರಿಕಾ ಕಚೇರಿಗೂ ಇವರೇ ತೆಗೆದುಕೊಂಡು ಹೋಗಿ ಕೊಟ್ಟೂ ಬರಬೇಕು. ಬಹುಶಃ ನೇತೃತ್ವ ಎನ್ನುವುದು ಅನುಭವಕ್ಕೆ ಬರಬೇಕಾದರೆ ಇಂತಹ ಜವಾಬ್ದಾರಿಗಳನ್ನೆಲ್ಲ ಬೇಸರವಿಲ್ಲದೆ ನಿಭಾಯಿಸುವುದರಿಂದಲೇ ಸಾಧ್ಯವೆಂದು ತೋರುತ್ತದೆ.


ಹೀಗೆ ಯಾರು ಯಾವುದೇ ಹುದ್ದೆಯಲ್ಲಿದ್ದರೂ ಸ್ವಲ್ಪವೂ ಅಹಂ ಇಲ್ಲದೆ, ಸಂಕೋಚವಿಲ್ಲದೆ ಎಲ್ಲ ಕೆಲಸಗಳನ್ನೂ ನಿರ್ವಹಿಸುವ ಮನೋಭಾವ, ಕರ್ತೃತ್ವ ಗುಣಗಳು ಹುಬ್ಬಳ್ಳಿಯ ಹುಡುಗರಲ್ಲಿದ್ದುದರಿಂದಲೇ ಅವರು ಸಂಘಟನೆಯ ಕಾರ್ಯದಲ್ಲಿ ಸಾಗುವುದು ಸುಲಭಸಾಧ್ಯವಾಯಿತು. ಅವರಿಗೆ ಶ್ರೀ ಕೃಷ್ಣಭಟ್ಟರು, ಹೊಸಬಾಳೆಯಂತಹವರ ಮಾರ್ಗದರ್ಶನ ದೊರೆತದ್ದರಿಂದ ಯಶಸ್ಸಿನ ಹಾದಿ ಇನ್ನಷ್ಟು ಸುಗಮವಾಯಿತು.

ಅನಂತಕುಮಾರ್ ಈ ವೇಳೆಗೆ ಪಿ.ಯು.ಸಿ. ಮುಗಿಸಿ ಬಿ.ಎ. ತರಗತಿಗೆ ಸೇರಿದ್ದರು. ಉಳಿದವರಿಗೆ ಪ್ರಾಜೆಕ್ಟ್ ವರ್ಕ್, ಸೆಮಿಸ್ಟರ್, ಅಸೈನ್ ಮೆಂಟುಗಳು ಇರುತ್ತಿದ್ದ ಹಾಗೆ ಅನಂತಕುಮಾರರಿಗೆ ಶೈಕ್ಷಣಿಕ ಒತ್ತಡವಿರುತ್ತಿರಲಿಲ್ಲ. ಹೀಗಾಗಿ ಉಳಿದವರಿಗಿಂತ ಅನಂತಕುಮಾರರಿಗೆ ಪರಿಷತ್ತಿನ ಕೆಲಸಕ್ಕಾಗಿ ಸ್ವಲ್ಪ ಹೆಚ್ಚು ಸಮಯವನ್ನು ವಿನಿಯೋಗಿಸಲು ಸಾಧ್ಯವಾಗುತ್ತಿತ್ತು. ಹಾಗೆಂದು ಯಾರೂ ಓದನ್ನು ಅಲಕ್ಷಿಸುವ ಹಾಗಿಲ್ಲ. ವಿದ್ಯಾರ್ಥಿ ಪರಿಷತ್ತಿನ ಕೆಲಸಕ್ಕೆ ತಿರುಗಿ ಓದು ಬಿಟ್ಟು ಫೇಲಾದ ಎಂದು ಯಾರೂ ಬೆರಳು ತೋರಿಸುವಂತಿರಬಾರದು. ಸಂಘಟನೆಗೆ ಕೆಟ್ಟ ಹೆಸರು ಬಾರದಂತೆ, ತನ್ನ ವೈಯಕ್ತಿಕ ಶಿಕ್ಷಣಕ್ಕೂ ಕುಂದು ಬಾರದಂತೆ ಚಟುವಟಿಕೆಗಳನ್ನು ಕೈಗೊಳ್ಳುವುದು ಮುಖ್ಯ.




ಶೈಕ್ಷಣಿಕ ದಿನಚರಿಯ ನಡುವೆ ಪರಿಷತ್ತಿನ ಕಾರ್ಯವನ್ನು ನಿರ್ವಹಿಸುವುದಕ್ಕೆ ತಕ್ಕ ವಯಸ್ಸು, ಮನಸ್ಸು ಎಲ್ಲವೂ ಇದ್ದುದರಿಂದ ಈ ಯುವಕರು ನಿರಂತರವಾಗಿ ಚಟುವಟಿಕೆಯಿಂದ ಇರುವುದು ಸಾಧ್ಯವಾಯಿತು..

ಬೆಳಗ್ಗೆ ಕಾಲೇಜಿಗೆ ಹೋದರೆ ಸಂಜೆ ಸುಮಾರು ಐದು ಗಂಟೆಯವರೆಗೂ ಅಲ್ಲಿಯೇ .ಇವರ ಪರಿಷತ್ತಿನ ಕಾರ್ಯಚಟುವಟಿಕೆಯೇನಿದ್ದರೂ ತದನಂತರವೇ ಆಗಬೇಕು. ಸಂಘಟನೆಯ ಕಾರ್ಯ, ಗುಂಪು, ಚರ್ಚೆ ಎಲ್ಲ ಮುಗಿದು ಇವರೆಲ್ಲ ಅವರವರ ಮನೆ ಸೇರುವುದು ರಾತ್ರಿ ಹತ್ತು ಗಂಟೆಯೇ ಆಗಿಬಿಡುವುದು. ಎಲ್ಲರ ಮನೆಗಳಲ್ಲೂ ಪೋಷಕರಿಗೆ ತಮ್ಮ ಹುಡುಗರು ಸರಿದಾರಿಯಲ್ಲಿದ್ದಾರೆ, ಒಳ್ಳೆಯ ಸಹವಾಸವಿದೆ, ಸಮಾಜಕ್ಕೆ ಒಳ್ಳೆಯದನ್ನು ಬಯಸುವ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ ಎಂಬ ಸ್ಪಷ್ಟ ತಿಳಿವಳಿಕೆ ಇದ್ದೇ ಇತ್ತು. ಹೀಗಾಗಿ ಯಾವ ತಂದೆತಾಯಿಯೂ ಮಕ್ಕಳ ದೈನಂದಿನ ಚಟುವಟಿಕೆಗಳಿಗೆ ಅಡ್ಡಬರುತ್ತಿರಲಿಲ್ಲ. ರಾತ್ರಿ ಮನೆಗೆ ಬಂದಮೇಲೆ ಇವರು ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಲೇ ಬೇಕಾಗಿತ್ತಲ್ಲ!



ಈ ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ ಅನಿರ್ಬಾಧಿತವಾಗಿ ಸಾಗುತ್ತಿದ್ದುದು ಅನಂತಕುಮಾರರ ಓದುವ ಹವ್ಯಾಸ! ಬಹುಶಃ ಅವರಂತೆ ನಿರಂತರವಾಗಿ ಓದುವ ಗೀಳನ್ನು ಬೆಳೆಸಿಕೊಂಡವರೇ ಅಪೂರ್ವ ಎನ್ನಿಸುವಷ್ಟರ ಮಟ್ಟಿಗೆ ಅವರು ಪುಸ್ತಕಗಳ ಓದಿನಲ್ಲಿ ತೊಡಗಿರುತ್ತಿದ್ದರು. ಪುಸ್ತಕಗಳ ವಿಷಯವೂ ವೈವಿಧ್ಯಮಯವಾಗಿದ್ದು, ಅವರೊಡನೆ ಮಾತುಕತೆಗೆ ತೊಡಗಿದವರಿಗೆ ಇದೆಲ್ಲಿಂದ ಇಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ ಎಂಬ ಬೆರಗು ಮೂಡಿಸುವ ಹಾಗಿರುತ್ತಿತ್ತು.

ಪುಟ 4 ರಲ್ಲಿ ಮುಂದುವರಿದಿದೆ

## ಅನಂತ ನೆನಪು: ಬಿ.ಎಸ್. ಯಡಿಯೂರಪ್ಪ

ಕರ್ನಾಟಕ ರಾಜಕಾರಣದ ಅಪರೂಪದ ಜೋಡಿ ಎಂದೇ ಹೆಸರಾದ ಬಿ.ಎಸ್. ಯಡಿಯೂರಪ್ಪ ಹಾಗೂ ಅನಂತಕುಮಾರ್ ಅವರ ನಡುವಿನ ಸಂಬಂಧ ಅವಿನಾಭಾವವಾದುದು. ಇತ್ತೀಚಿನ ದೂರದರ್ಶನ ಸಂದರ್ಶನವೊಂದರಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ ಆತ್ಮೀಯ ಮಿತ್ರ ಹಾಗೂ ರಾಜಕೀಯ ಪಥದ ಮಾರ್ಗದರ್ಶಿಯಾಗಿದ್ದ ಅನಂತಕುಮಾರ್ ಅವರನ್ನು ಸ್ಮರಿಸುತ್ತಾ ಅತ್ಯಂತ ಭಾವುಕರಾದರು.

ರಾಜಕೀಯ ಏರಿಳಿತಗಳ ನಡುವೆಯೂ ಈ ಜೋಡಿ ಎಂದೂ ಪರಸ್ಪರ ಗೌರವವನ್ನು ಕಳೆದುಕೊಳ್ಳಲಿಲ್ಲ. ತುರ್ತು ಪರಿಸ್ಥಿತಿಯ ದಿನಗಳಿಂದ ಹಿಡಿದು ಪಕ್ಷವನ್ನು ಶೂನ್ಯದಿಂದ ಸಂಘಟಿಸಿ ಬಲಿಷ್ಠವಾಗಿ ಕಟ್ಟುವವರೆಗೆ ಅವರಿಬ್ಬರೂ ಕಂಡ ಕನಸು ಒಂದೇ ಆಗಿತ್ತು. ಪಕ್ಷವು ಹೆಮ್ಮರವಾಗಿ ಬೆಳೆದಿರುವ ಈ ಸಂದರ್ಭದಲ್ಲಿ ಅನಂತಕುಮಾರ್ ಅವರ ಭೌತಿಕ ಅನುಪಸ್ಥಿತಿಯು ಯಡಿಯೂರಪ್ಪನವರನ್ನು ಮಾತ್ರವಲ್ಲದೆ ಇಡೀ ಕರ್ನಾಟಕದ ರಾಜಕೀಯ ವಲಯವನ್ನೇ ಕಾಡುತ್ತಿದೆ.

**CKR 45 ಅಂಬಾಸಿಡರ್ ಮತ್ತು ಪಕ್ಷದ ಸಂಘಟನೆ:** ಪಕ್ಷದ ಸಂಘಟನೆಗಾಗಿ ಇಬ್ಬರು ನಾಯಕರು ಪಟ್ಟ ಶ್ರಮ ಅಸಾಧಾರಣವಾದುದು. "CKR 45" ನೋಂದಣಿ ಸಂಖ್ಯೆಯ ಹಳೆಯ ಅಂಬಾಸಿಡರ್ ಕಾರಿನಲ್ಲಿ ಇಡೀ ರಾಜ್ಯವನ್ನು ಸುತ್ತಿ, ಹಗಲಿರುಳು ಸಂಘಟನೆಯಲ್ಲಿ ತೊಡಗಿದ್ದ ದಿನಗಳನ್ನು ಯಡಿಯೂರಪ್ಪನವರು ಮೆಲುಕು ಹಾಕಿದ್ದಾರೆ.ಅನಂತಕುಮಾರ್ ಇವತ್ತು ನಮ್ಮ ಜೊತೆ ಇರಬೇಕಿತ್ತು' ಎಂದು ಭಾವುಕರಾದ ಅವರು, ಇವತ್ತು ಪಕ್ಷ ಈ ಮಟ್ಟಕ್ಕೆ ಬೆಳೆಯಲು ಅಡಿಪಾಯ ಹಾಕಿದವರಲ್ಲಿ ಅನಂತಕುಮಾರ್ ಪ್ರಮುಖರು. ಸಂಘಟನೆಯ ಪ್ರತಿ ಹಂತದಲ್ಲೂ ಅವರ ನೆನಪುಗಳು ನಮ್ಮನ್ನು ಕಾಡುತ್ತಿವೆ" ಎಂದು ಅವರು ಸ್ಮರಿಸಿದರು.



**ಹಣಕಾಸು ಸಚಿವರಾಗಲು ಪ್ರೇರಣೆ:** ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಒಂದು ಮಹತ್ವದ ತಿರುವು ಬಂದಿತ್ತು. ಹಣಕಾಸು ಇಲಾಖೆಯ ಬಗ್ಗೆ ತಮಗೆ ಹೆಚ್ಚಿನ ಅನುಭವವಿಲ್ಲ ಎಂದು ಅವರು ಹಿಂದೇಟು ಹಾಕಿದಾಗ, ಅನಂತಕುಮಾರ್ ಅವರು ಪಟ್ಟು ಹಿಡಿದು ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದರು. "ನೀನು ಹಣಕಾಸು ಸಚಿವನೇ ಆಗಬೇಕು, ಅದರ ಮಹತ್ವ ನಿನಗೆ ಆಮೇಲೆ ತಿಳಿಯುತ್ತದೆ" ಎಂದು ಅನಂತಕುಮಾರ್ ಒತ್ತಾಯಿಸಿದ್ದರು. ಹಣಕಾಸು ನೀತಿ ಮತ್ತು ಆಡಳಿತ ಶಿಸ್ತಿನ ಜ್ಞಾನ ಮುಂದೊಂದು ದಿನ ಯಡಿಯೂರಪ್ಪನವರಿಗೆ ಒಬ್ಬ ಯಶಸ್ವಿ ಮುಖ್ಯಮಂತ್ರಿಯಾಗಿ ರಾಜ್ಯ ಆಳಲು ಬಲ ನೀಡಿತು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಮತ್ತು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಲು ಅನಂತ ಕುಮಾರ್ ಅವರ ದೂರದೃಷ್ಟಿ ಮತ್ತು ಸಲಹೆಗಳು ಅತ್ಯಂತ ಪ್ರಮುಖವಾಗಿದ್ದವು. "ಇಂದು ನಾವು ಏನಾದರೂ ಬೆಳೆದಿದ್ದರೆ ಅದರಲ್ಲಿ ಅನಂತ ಕುಮಾರ್ ಅವರ ಕೊಡುಗೆ ಬಹಳ ದೊಡ್ಡದಿದೆ" ಎಂದು ಹೇಳುವ ಮೂಲಕ ಯಡಿಯೂರಪ್ಪನವರು ತಮ್ಮ ದಶಕಗಳ ರಾಜಕೀಯ ಸಾರಥಿಗೆ ಗೌರವ ಸಲ್ಲಿಸಿದ್ದಾರೆ.

ಪುಟ 3 ರಿಂದ

## ಸಂಘಟನೆಯ ಚಟುವಟಿಕೆ

ಹುಬ್ಬಳ್ಳಿಯ ಸಮೀಪದ ಅಗ್ರಹಾರ ತಿಮ್ಮಸಾಗರ ಎಂಬ ಹಳ್ಳಿಯೊಂದನ್ನು ದತ್ತು ತೆಗೆದುಕೊಂಡು ವಿದ್ಯಾರ್ಥಿ ಪರಿಷತ್ತಿನವರು ಅಲ್ಲಿ ರಚನಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ವಾರಕ್ಕೊಮ್ಮೆ ಆ ಗ್ರಾಮಕ್ಕೆ ಭೇಟಿಕೊಟ್ಟು ಬರುವ ಕೆಲಸವೂ ಇರುತ್ತಿತ್ತು. ಪರಿಷತ್ತಿನ ಇನ್ನೊಂದು ಕಾರ್ಯಕ್ರಮ ಸ್ಟೂಡೆಂಟ್ ಎಕ್ಸ್ ಪೀರಿಯೆನ್ಸ್ ಇನ್ ಇಂಟರ್ ಸ್ಟೇಟ್ ಲಿವಿಂಗ್ . ಇದರ ಅನ್ವಯವಾಗಿ ಈಶಾನ್ಯ ರಾಜ್ಯಗಳಿಂದ ಯುವ ವಿದ್ಯಾರ್ಥಿಗಳು ಬಂದು ದಕ್ಷಿಣ ಭಾರತದ ಕುಟುಂಬ ಸದಸ್ಯರೊಡನೆ ಹಲವು ದಿನಗಳಿದ್ದು ಇಲ್ಲಿಯ ಸಂಸ್ಕೃತಿ, ಸಂಪ್ರದಾಯಗಳನ್ನು ಅರಿಯುವ ಯೋಜನೆ. ಕರ್ನಾಟಕಕ್ಕೆ ಈ ತಂಡ ಬಂದಾಗ ಹುಬ್ಬಳ್ಳಿಯ ಸಂಘಟನೆಯ ಪರವಾಗಿ ಅವರಿಗೆ ಬೇಕಾದ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು.

ವಿದ್ಯಾರ್ಥಿ ನಾಯಕತ್ವಕ್ಕೆ ಪರಿಷತ್ತಿನಲ್ಲಿ ವಿಶೇಷ ಮಹತ್ವ ನೀಡಲಾಗಿತ್ತು. ಆ ಕಾಲಕ್ಕೆ ಶ್ರೀ ಅರುಣ್ ಜೇಟ್ಲಿಯವರು ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆ ಸಂದರ್ಭದಲ್ಲಿ ವಾರಣಾಸಿಯಲ್ಲಿ ಆಯೋಜಿಸಲಾಗಿದ್ದ ಸಮಾವೇಶಕ್ಕೆ ಅನಂತಕುಮಾರ್, ಮೊದಲಾದ ಕಾರ್ಯಕರ್ತರು ಎಲ್ಲರೂ ಹೋಗಿದ್ದರು. ಹೀಗೆ ರಚನಾತ್ಮಕ, ಪ್ರಾತಿನಿಧ್ಯಾತ್ಮಕ ಮತ್ತು ಸಂಘರ್ಷಾತ್ಮಕ- ಮೂರೂ ರೀತಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುತ್ತ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆ ಮುಂದುವರಿದಿತ್ತು.

ಕಾಲೇಜಿನಲ್ಲಿ ಫೀಸ್ ಹೆಚ್ಚಳವಾಗಿದೆಯೆಂದೋ, ಹಾಸ್ಟೆಲುಗಳಲ್ಲಿ ಸೌಲಭ್ಯ ಸರಿಯಿಲ್ಲವೆಂದೋ ಕೆಲವು ವಿಷಯಗಳನ್ನು ಪಟ್ಟಿ ಮಾಡಿಕೊಂಡು ಹೋರಾಟ ನಡೆಸುವುದಿತ್ತು. ಗ್ರಾಮ ವಿಕಾಸ ಯೋಜನೆಯನ್ನು ಮುಂದಿಟ್ಟುಕೊಂಡು ಪ್ರತಿವಾರ ಒಂದೊಂದು ಬ್ಯಾಚ್ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಶ್ರಮದಾನ, ಮಕ್ಕಳಿಗೆ ಸಂಸ್ಕಾರ ಕೇಂದ್ರ ನಡೆಸುವುದು ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು.

ಸಿ.ಎಂ. ಇಬ್ರಾಹಿಂ ಕೈವಾಡವಿತ್ತೆನ್ನಲಾದ ಪದ್ಮಕ್ಕ ಪ್ರಕರಣ, ದಾವಣಗೆರೆಯ ರೋಲೆಕ್ಸ್ ವಾಚ್ ಹಗರಣ ಇವನ್ನೆಲ್ಲ ಶ್ರೀ ಎ.ಕೆ. ಸುಬ್ಬಯ್ಯನವರು ಕೈಗೆತ್ತಿಕೊಂಡು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುವ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ತೂ ಹೋರಾಟದಲ್ಲಿ ಭಾಗವಹಿಸಿತ್ತು.

ಆ ಕಾಲಕ್ಕೆ ಶ್ರೀ ಗೋವಿಂದಾಚಾರ್ಯರು ದಕ್ಷಿಣಾಂಚಲ ಕ್ಷೇತ್ರೀಯ ಸಂಘಟನಾ ಮಂತ್ರಿಯಾಗಿದ್ದರು. ಅವರು ಈ ಪ್ರಾಂತ್ಯಕ್ಕೆ ಬಂದು ವಿದ್ಯಾರ್ಥಿ ಪರಿಷತ್ತಿನ ಪ್ರಾಂತ್ಯ ಅಭ್ಯಾಸಗಳನ್ನು ನಡೆಸಿ ವಿಶ್ಲೇಷಣೆ ಮಾಡಿದರು. ಎಲ್ಲಿ ಯಾವ ಬಗೆಯ ಕಾರ್ಯ ಚಟುವಟಿಕೆ, ಹೋರಾಟ ಮಾಡಬಹುದೆಂಬ ಸಲಹೆ ಸೂಚನೆಗಳನ್ನು ನೀಡಿದರು. ಅವರ ಮಾರ್ಗದರ್ಶನದಂತೆ ಹುಬ್ಬಳ್ಳಿ, ದಾವಣಗೆರೆ, ಶಿವಮೊಗ್ಗ ಎಲ್ಲೇ ಯಾವ ಹೋರಾಟವೇ ನಡೆಯಲಿ, ಅನಂತಕುಮಾರ್ ಅವರ ಮುಂದಾಳುತನದಲ್ಲೇ ನಡೆಯುತ್ತಿತ್ತು. ಪರಿಷತ್ತಿನಲ್ಲಿ ಸಕ್ರಿಯರಾಗಿರದ ವಿದ್ಯಾರ್ಥಿಗಳನ್ನು ಸಂಘಟಿಸುವ ಕೆಲಸವನ್ನು ಅಚ್ಯುತ, ವಿಷ್ಣುಕಾಂತ ನಿರ್ವಹಿಸುತ್ತಿದ್ದರು.

ಹೋರಾಟವಿರಲಿ, ಗ್ರಾಮಸೇವೆಯಿರಲಿ, ಚಳುವಳಿಯಿರಲಿ, ಪರಿಷತ್ತಿನ ಕಾರ್ಯಕರ್ತರು ತಮ್ಮದೇ ಹಣ ಖರ್ಚುಮಾಡಿಕೊಂಡೋ, ವಿದ್ಯಾರ್ಥಿಗಳಿಂದ ಅಲ್ಪಸ್ವಲ್ಪ ಸಂಗ್ರಹಿಸಿಯೋ ಕಾರ್ಯಕ್ರಮವನ್ನು ನಿಭಾಯಿಸಬೇಕಿತ್ತು. ಅಷ್ಟು ಹೊರತು, ಉಳಿದ ಯಾವ ಮೂಲದಿಂದಲೂ ಇವರಿಗೆ ಹತ್ತು ರೂಪಾಯಿಯ ನೆರವೂ ಸಿಗುವಂತಿರಲಿಲ್ಲ. ಮನೆಯಲ್ಲಿ ಪಾಕೆಟ್ ಮನಿ ಕೊಟ್ಟದ್ದೂ ಪರಿಷತ್ತಿನ ಕಾರ್ಯಕ್ಕೇ ವಿನಿಯೋಗವಾಗುವುದು. ಇವರ ಗುಂಪಿನಲ್ಲಿದ್ದವರಲ್ಲಿ ಅಚ್ಯುತನ ಮನೆಯವರು ತಕ್ಕಮಟ್ಟಿಗೆ ಅನುಕೂಲಸ್ಥರಾಗಿದ್ದವರು. ಪರಿಷತ್ತಿನ ಕೆಲಸಕ್ಕೆ ಹೀಗೆ ಖರ್ಚುಮಾಡಲು ಹಣ ಬೇಕಾಗಿದೆ ಎಂದು ಅಚ್ಯುತ ಕೇಳುವಾಗ ಅವರ ತಂದೆ, ಆಗಲಿ ತೆಗೆದುಕೋ ಎನ್ನುತ್ತಿದ್ದರು. ಅಚ್ಯುತ ಒಬ್ಬನ ಬಳಿ ಸ್ಕೂಟರ್ ಇದ್ದು ಉಳಿದವರು ಸೈಕಲ್ ನಲ್ಲಿ ತಿರುಗಾಡುತ್ತಿದ್ದರು.

ಹಣಸಂಗ್ರಹಕ್ಕೆ ಹೋದಾಗ ಕೆಲವರು ಅಲ್ಪಸ್ವಲ್ಪ ಕೊಡುತ್ತಿದ್ದುದೂ ಉಂಟು. ಸಂಘದ ಚಾಲಕರಾಗಿದ್ದ ಡಾ. ನರೇಗಲ್ಲರಂಥ ಹಿರಿಯರು ಇಂಥವರಲ್ಲಿ ಹೋಗಿ, ಒಂದಿಷ್ಟು ಹಣ ಕೊಡುತ್ತಾರೆ ಎಂದು ಸೂಚನೆ ಕೊಟ್ಟು ಕಳುಹಿಸುವುದೂ ಇತ್ತು.

# ಅನಂತಕುಮಾರ್: ಕರುನಾಡಿನ ಧ್ರುವತಾರೆ, ಅಪ್ರತಿಮ ಚೇತನ

ನಾನು ಕಂಡಂತೆ



ಅನಂತಕುಮಾರ್

ಕನ್ನಡದ ಮಣ್ಣಿನ ಗುಣವೇ ವಿಶಿಷ್ಟವಾದುದು; ಇಲ್ಲಿ ಜನಿಸಿದ ಪ್ರತಿಯೊಂದು ಜೀವವೂ 'ವಿಶ್ವಮಾನವ'ನಾಗುವ ಕನಸನ್ನು ಕಾಣುತ್ತದೆ. ಅಂತಹ ಉದಾತ್ತ ಕನಸನ್ನು ಸಾಕಾರಗೊಳಿಸಿ, ಇಡೀ ದೇಶದ ಗಮನವನ್ನು ಕರ್ನಾಟಕದತ್ತ ಸೆಳೆಯುವಂತೆ ಮಾಡಿದ ನಮ್ಮ ಹೆಮ್ಮೆಯ ಧ್ರುವತಾರೆ ಅನಂತಕುಮಾರ್ ಅವರು. ಇಂದು ಅವರು ದೈಹಿಕವಾಗಿ ನಮ್ಮೊಂದಿಗೆ ಇಲ್ಲ ಎಂಬ ಸತ್ಯವನ್ನು ಅರಗಿಸಿಕೊಳ್ಳುವುದು ನಮಗೆಲ್ಲರಿಗೂ ಇಂದಿಗೂ ಕಷ್ಟಕರವಾದ ವಿಷಯವಾಗಿದೆ.

**ಆದರ್ಶದ ಬುನಾದಿ: ಸೇವೆಯೇ ಮಂತ್ರ**

ಬೆಂಗಳೂರಿನ ಗಲ್ಲಿಗಳಲ್ಲಿ ಅಮ್ಮ ಗಿರಿಜಾ ಶಾಸ್ತ್ರಿಯವರ ಪ್ರೀತಿಯ ನೆರಳಿನಲ್ಲಿ ಬೆಳೆದ ಅನಂತಕುಮಾರ್ ಅವರು, ಬಾಲ್ಯದಿಂದಲೇ 'ಸೇವೆ'ಯನ್ನು ಜೀವನದ ಮಂತ್ರವನ್ನಾಗಿ ಸ್ವೀಕರಿಸಿದ್ದರು. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಜೈಲುವಾಸ ಅನುಭವಿಸಿದ ಆ ಯುವಕನ ಮನಸ್ಸಿನಲ್ಲಿ ಅಧಿಕಾರದ ಲಾಲಸೆಯಿರಲಿಲ್ಲ, ಬದಲಾಗಿ ಅನ್ಯಾಯದ ವಿರುದ್ಧದ ತೀವ್ರವಾದ ಕಿಚ್ಚಿತ್ತು. ಒಬ್ಬ ಸಾಮಾನ್ಯ ಯುವಕ ದಿಲ್ಲಿಯ ರಾಜಕೀಯ ಗದ್ದುಗೆಯನ್ನು ಏರಬಲ್ಲ ಎಂಬುದಕ್ಕೆ ಅವರ ಅಚಲ ಪರಿಶ್ರಮವೇ ಸಾಕ್ಷಿಯಾಗಿದೆ.

**ಜಾಗತಿಕ ವೇದಿಕೆಯಲ್ಲಿ ಕನ್ನಡದ ಡಿಂಡಿಮ**

ಒಬ್ಬ ಕನ್ನಡಿಗನಾಗಿ ನನಗೆ ಅತಿ ಹೆಚ್ಚು ಹೆಮ್ಮೆ ಎನಿಸುವುದು ಅವರು ವಿಶ್ವಸಂಸ್ಥೆಯ (UN) ಮಹಾಸಭೆಯಲ್ಲಿ ಎದ್ದು ನಿಂತು, ''ನಮಸ್ಕಾರ'' ಎಂದು ಕನ್ನಡದಲ್ಲಿ ತಮ್ಮ ಮಾತುಗಳನ್ನು ಆರಂಭಿಸಿದ ಕ್ಷಣ. ಜಗತ್ತಿನ ಅತಿ ದೊಡ್ಡ ವೇದಿಕೆಯಲ್ಲಿ ಕನ್ನಡದ ಕಂಪನ್ನು ಪಸರಿಸಿದ ಆ ಐತಿಹಾಸಿಕ ಕ್ಷಣ ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಎತ್ತರದ ಸ್ಥಾನಕ್ಕೇರಿದರೂ, ಅವರು ತಮ್ಮ ಕನ್ನಡತನವನ್ನು ಹಾಗೂ ಕರುನಾಡಿನ ಮೇಲಿನ ಪ್ರೇಮವನ್ನು ಎಂದಿಗೂ ಮರೆತಿರಲಿಲ್ಲ.

**ಅದಮ್ಯ ಚೇತನ: ಮಾನವೀಯತೆಯ ಪ್ರತೀಕ**

ಅನಂತ್ ಕುಮಾರ್ ಅವರು ಬರಿಯ ರಾಜಕಾರಣಿಯಾಗಿ ಉಳಿಯಲಿಲ್ಲ; ಅವರು ಜನರ 'ಅಣ್ಣ'ನಾದರು. ತಮ್ಮ ಶ್ರೀಮತಿ ತೇಜಸ್ವಿನಿ ಅವರೊಂದಿಗೆ ಸೇರಿ ಆರಂಭಿಸಿದ 'ಅದಮ್ಯ ಚೇತನ' ಸಂಸ್ಥೆ, ಇಂದು ಲಕ್ಷಾಂತರ ಶಾಲಾ ಮಕ್ಕಳ ಹಸಿವನ್ನು ನೀಗಿಸುತ್ತಿದೆ. "ಯಾವುದೇ ಮಗು ಹಸಿವಿನಿಂದ ಪಾಠ ಕೇಳಬಾರದು" ಎಂಬ ಅವರ ಕಾಳಜಿ, ಅವರೊಳಗಿದ್ದ ಮೃದು ಮನಸ್ಸಿನ ಮಾನವತಾವಾದಿಯನ್ನು ಎತ್ತಿ ತೋರಿಸುತ್ತದೆ. ಇಂದು ಪ್ರತಿ ತುತ್ತು ಅನ್ನದಲ್ಲೂ ಅವರ ಪ್ರೀತಿ ಅಡಗಿದೆ.



**ಅಚಲ ನಿರ್ಧಾರ, ಸದಾ ನಗುಮುಖದ ಸಾರಥಿ**

ನಗರಾಭಿವೃದ್ಧಿ ಸಚಿವರಾಗಿ ಬೆಂಗಳೂರಿಗೆ ಮೆಟ್ರೋ ರೈಲು ಯೋಜನೆ ತಂದದ್ದಿರಲಿ ಅಥವಾ ರೈತರಿಗಾಗಿ 'ಬೇವು ಲೇಪಿತ ಯೂರಿಯಾ' ಯೋಜನೆ ಜಾರಿಗೆ ತಂದದ್ದಿರಲಿ, ಅವರ ಪ್ರತಿಯೊಂದು ಹೆಜ್ಜೆಯಲ್ಲೂ ಕರ್ನಾಟಕದ ಅಭಿವೃದ್ಧಿ ಎದ್ದು ಕಾಣುತ್ತಿತ್ತು. ಕ್ಯಾನ್ಸರ್‌ನಂತಹ ಮಹಾಮಾರಿ ಅವರನ್ನು ಕಾಡುತ್ತಿದ್ದಾಗಲೂ ಅವರು ಮುಗುಳ್ನಗುವನ್ನು ಕಳೆದುಕೊಳ್ಳಲಿಲ್ಲ. ಮರಣದ ಸನಿಹದಲ್ಲಿದ್ದಾಗಲೂ ಅವರ ಚಿಂತನೆ ತನ್ನ ದೇಶ ಮತ್ತು ಜನರ ಯೋಗಕ್ಷೇಮದ ಬಗ್ಗೆಯೇ ಇತ್ತು.

**ಯುವ ಪೀಳಿಗೆಗೆ ಮಾರ್ಗದರ್ಶನ**

ಜಯ ಕರ್ನಾಟಕ ಜನಪರ ವೇದಿಕೆಯ ಮೂಲಕ ನಾನು ನಾಡಿನ ಯುವಕರಿಗೆ ಹೇಳುವುದಿಷ್ಟೇ: ಅನಂತ್ ಕುಮಾರ್ ಅವರ ಜೀವನವೇ ನಮಗೊಂದು ದೊಡ್ಡ ಪಾಠ. ಸೋಲಿಗೆ ಬೆನ್ನು ತೋರಿಸದೆ, ಅಧಿಕಾರವನ್ನು ಸಮಾಜ ಸೇವೆಯ ಸಾಧನವನ್ನಾಗಿ ಬಳಸಿಕೊಂಡವರು ಅವರು. ಅವರ ಅಚಲ ನಂಬಿಕೆ, ಕನ್ನಡದ ಮೇಲಿನ ಅಭಿಮಾನ ಮತ್ತು ಶಿಸ್ತಿನ ಬದುಕು ನಮ್ಮೆಲ್ಲರಿಗೂ ದಾರಿದೀಪವಾಗಲಿ.

ದೆಹಲಿಯಲ್ಲಿ ಕರ್ನಾಟಕದ ಧ್ವನಿಯಾಗಿ ಅಬ್ಬರಿಸುತ್ತಿದ್ದ ಆ ಕಂಠ ಇನ್ನು ಕೇಳಿಸದು, ಪ್ರೀತಿಯಿಂದ ಭುಜದ ಮೇಲೆ ಕೈಹಾಕಿ ಮಾತನಾಡಿಸುತ್ತಿದ್ದ ಆ ಸ್ನೇಹಮಯಿ ಕೈಗಳು ಇನ್ನು ಸಿಗವು. ಆದರೆ, ಅವರು ಬಿಟ್ಟು ಹೋದ ಆದರ್ಶಗಳು, ಬೆಂಗಳೂರಿನ ಮೆಟ್ರೋ ಹಳಿಗಳಲ್ಲಿ, ಹಸಿರು ಭಾನುವಾರದ ಗಿಡಗಳಲ್ಲಿ, ಮಕ್ಕಳ ಬಿಸಿಯೂಟದ ಪರಿಮಳದಲ್ಲಿ ಸದಾ ಜೀವಂತವಾಗಿರುತ್ತವೆ. ಅನಂತ್ ಕುಮಾರ್ ಅವರೇ, ನೀವು ಹಚ್ಚಿದ ಕನ್ನಡದ ದೀಪ ಎಂದಿಗೂ ಆರುವುದಿಲ್ಲ. "ದೇಶ ಮೊದಲು, ಆಮೇಲೆ ಪಕ್ಷ, ಕೊನೆಯಲ್ಲಿ ನಾನು" ಎಂಬ ತತ್ವದೊಂದಿಗೆ ಬದುಕಿದ ಈ ಮಹಾನ್ ಚೇತನಕ್ಕೆ, ನಮ್ಮ "ಜಯ ಕರ್ನಾಟಕ ಜನಪರ ವೇದಿಕೆ"ಯ ಪರವಾಗಿ ಮತ್ತು ಆರು ಕೋಟಿ ಕನ್ನಡಿಗರ ಪರವಾಗಿ ಕೋಟಿ ಕೋಟಿ ಪ್ರಣಾಮಗಳು

**-ಹೆಚ್. ರಾಮಚಂದ್ರಯ್ಯ**
**ರಾಜ್ಯ ಕಾರ್ಯಾಧ್ಯಕ್ಷರು, ಜಯ ಕರ್ನಾಟಕ ಜನಪರ ವೇದಿಕೆ)**







**ಒಂದು ತುತ್ತು ಅನ್ನ, ನೂರಾರು ಮುಖಗಳಲ್ಲಿ ಮಂದಹಾಸ. ಈ ಪುಣ್ಯ ಕಾರ್ಯದಲ್ಲಿ ನೀವು ಭಾಗಿಯಾಗಿ.**

**ಸಂಪರ್ಕ ಸಂಖ್ಯೆ : 8904623967**

# ಅದಮ್ಯ ಚೇತನದ 'ಇಕೋ ಅಂಗಡಿ'



ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯ 'ಅನ್ನಪೂರ್ಣ ಅಡುಗೆ ಮನೆ' ಸಮುಚ್ಚಯದಲ್ಲಿ, ಅದಮ್ಯ ಚೇತನ ಸಂಸ್ಥೆಯು ಕಳೆದ ಮಾರ್ಚ್ ತಿಂಗಳಿನಿಂದ ಪ್ರತಿ ಶನಿವಾರ ಮಧ್ಯಾಹ್ನ 4 ಗಂಟೆಯಿಂದ ಸಂಜೆ 7 ಗಂಟೆಯವರೆಗೆ 'ಇಕೋ ಅಂಗಡಿ'ಯನ್ನು ಯಶಸ್ವಿಯಾಗಿ ನಡೆಸುತ್ತಾ ಬರುತ್ತಿದೆ. ಸಾವಯವ ಉತ್ಪನ್ನಗಳನ್ನು ಉತ್ತೇಜಿಸುವ ಮೂಲಕ ಮನುಕುಲದ ಆರೋಗ್ಯ ಮತ್ತು ಪರಿಸರದ ಸಂರಕ್ಷಣೆಯತ್ತ ಅದಮ್ಯ ಚೇತನ ಸಂಸ್ಥೆ ಕೈಗೊಂಡಿರುವ ಈ ಹೆಜ್ಜೆ ಅತ್ಯಂತ ಶ್ಲಾಘನೀಯವಾಗಿದ್ದು, ಹಸಿರು ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಬಯಸುವವರಿಗೆ ಇದೊಂದು ಅರ್ಥಪೂರ್ಣ ವೇದಿಕೆಯಾಗಿದೆ.

ಈ ಇಕೋ ಅಂಗಡಿಯಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ತಾಜಾ ಹಣ್ಣು-ತರಕಾರಿಗಳ ಜೊತೆಗೆ ಕೆಂಪಕ್ಕಿ, ರಾಜಮುಡಿ ಅಕ್ಕಿ, ಸಿರಿಧಾನ್ಯಗಳು, ವಿವಿಧ ಬೇಳೆಕಾಳುಗಳು, ಗಾಣದ ಎಣ್ಣೆ, ಅರಿಶಿಣ ಹಾಗೂ ಏಲಕ್ಕಿ, ಲವಂಗ, ಕಾಳುಮೆಣಸು, ಜಾಯಿಕಾಯಿ ಮತ್ತು ದಾಲ್ಚಿನಿಯಂತಹ ಶುದ್ಧ ಸಾಂಬಾರ ಪದಾರ್ಥಗಳು ಲಭ್ಯವಿವೆ. ಇವುಗಳಲ್ಲದೆ, ಸುಕೇಳಿ (ಒಣಗಿಸಿದ ಬಾಳೆಹಣ್ಣಿನ ತುಣುಕುಗಳು) ಹಾಗೂ ಮನೆ ತೋಟಕ್ಕೆ ಅಗತ್ಯವಾದ ತರಕಾರಿ ಸಸಿಗಳು ಮತ್ತು ಕಾಂಪೋಸ್ಟ್ ಗೊಬ್ಬರವೂ ಇಲ್ಲಿ ದೊರೆಯುತ್ತವೆ. ಬ್ರಿಕ್ಸ್ (BRICS) ಮತ್ತು ಅಕ್ಷಯ ಕಲ್ಪದಂತಹ ಪ್ರಮುಖ ಸಂಸ್ಥೆಗಳು ತಮ್ಮ ಗುಣಮಟ್ಟದ ಉತ್ಪನ್ನಗಳನ್ನು ಇಲ್ಲಿ ಮಾರಾಟಕ್ಕೆ ಇರಿಸಿದ್ದು, ಗ್ರಾಹಕರಿಗೆ ಒಂದೇ ಸೂರಿನಡಿ ಸಾವಯವ ಉತ್ಪನ್ನಗಳನ್ನು ಖರೀದಿಸುವ ಸುವರ್ಣಾವಕಾಶವನ್ನು ಕಲ್ಪಿಸಲಾಗಿದೆ. ಈ ಉಪಕ್ರಮವು ಗ್ರಾಹಕರಿಗೆ ಆರೋಗ್ಯಕರ ಆಯ್ಕೆಗಳನ್ನು ಒದಗಿಸುವುದರ ಜೊತೆಗೆ, ಸಾವಯವ ಕೃಷಿಕರಿಗೂ ಸೂಕ್ತ ಮಾರುಕಟ್ಟೆ ಒದಗಿಸುವ ಮೂಲಕ ಪ್ರೋತ್ಸಾಹ ನೀಡುತ್ತಿದೆ. ಅಂಗಡಿಗೆ ಭೇಟಿ ನೀಡುವವರು ಅದಮ್ಯ ಚೇತನದ ಹೆಮ್ಮೆಯ 'ಅನ್ನಪೂರ್ಣ ಅಡುಗೆ ಮನೆ'ಯನ್ನು ವೀಕ್ಷಿಸುವ ಅವಕಾಶವನ್ನೂ ಹೊಂದಿದ್ದಾರೆ. ಲಕ್ಷಾಂತರ ಜನರಿಗೆ ಊಟ ಸಿದ್ಧಪಡಿಸುವ ಸಾಮರ್ಥ್ಯವಿರುವ ಈ ಅಡುಗೆಮನೆಯು ಎಲ್‌ಪಿಜಿ ಸಿಲಿಂಡರ್‌ಗಳಿಲ್ಲದೆ, 'ಶೂನ್ಯ ತ್ಯಾಜ್ಯ' (Zero Waste) ತತ್ವದಡಿ ಪರಿಸರಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಇದರ ಮತ್ತೊಂದು ವಿಶೇಷತೆಯಾಗಿದೆ.

ಅದಮ್ಯ ಚೇತನದ 'ಇಕೋ ಅಂಗಡಿ'ಯು ಕೇವಲ ವಾಣಿಜ್ಯ ಉದ್ದೇಶದ ಮಾರಾಟ ಕೇಂದ್ರವಾಗಿ ಸೀಮಿತವಾಗದೆ, ಜೀವನಮೌಲ್ಯ ಮತ್ತು ಪರಿಸರ ಜಾಗೃತಿಯನ್ನು ಬಿತ್ತುವ ಮಾರ್ಗದರ್ಶಕ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತಿದೆ. ಸಮಾಜಕ್ಕೆ ಉಪಯುಕ್ತವಾದ ಜ್ಞಾನವನ್ನು ಹಂಚುವ ಸದಾಶಯದಿಂದ, ಪ್ರತಿ ಶನಿವಾರ ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಅದಮ್ಯ ಚೇತನದ ಸಭಾಂಗಣದಲ್ಲಿ ವೈವಿಧ್ಯಮಯ ವಿಷಯಗಳ ಕುರಿತು ಉಚಿತ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. ಸಾವಯವ ಉತ್ಪನ್ನಗಳ ಮಾರಾಟದ ಜೊತೆಗೆ, ಬದುಕಿಗೆ ದಿಕ್ಸೂಚಿಯಾಗಬಲ್ಲ ಇಂತಹ ಜ್ಞಾನವರ್ಧಕ ಕಾರ್ಯಾಗಾರಗಳು ಸಾರ್ವಜನಿಕರಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ಈ ಕಾರ್ಯಾಗಾರ ಸರಣಿಯು ಮಾರ್ಚ್ 14ರಂದು ಅದ್ದೂರಿಯಾಗಿ ಆರಂಭಗೊಂಡಿತು. ಅಂದು ಬ್ರಿಕ್ಸ್ ಸಂಸ್ಥೆಯ ಮುಖ್ಯಸ್ಥರಾದ ರಾಜೇಂದ್ರ ಹೆಗಡೆ ಅವರು, ಮನೆಯಲ್ಲಿನ ತರಕಾರಿ-ಹಣ್ಣಿನ ಸಿಪ್ಪೆಗಳು, ಹೂವುಗಳು, ಕಾಫಿ-ಟೀ ಪುಡಿ ಮತ್ತು ಮೊಟ್ಟೆಯ ಚಿಪ್ಪಿನಂತಹ ತ್ಯಾಜ್ಯಗಳನ್ನು ಬಳಸಿ ಅತ್ಯಂತ ಸುಲಭವಾಗಿ ಕಾಂಪೋಸ್ಟ್ ಗೊಬ್ಬರ ತಯಾರಿಸುವ ವಿಧಾನವನ್ನು ಪ್ರಾತ್ಯಕ್ಷಿಕೆಯೊಂದಿಗೆ ವಿವರಿಸಿದರು. ಮಣ್ಣು, ಕೋಕೋಪಿಟ್ ಮತ್ತು ಮಜ್ಜಿಗೆಯನ್ನು ಬಳಸಿ, ಕಡಿಮೆ ಜಾಗದಲ್ಲಿ, ಯಾವುದೇ ದುರ್ವಾಸನೆ ಬಾರದಂತೆ ಗೊಬ್ಬರ ತಯಾರಿಸುವ ಕುರಿತಾದ ಅವರ ಮಾರ್ಗದರ್ಶನ ಸಭಿಕರಿಗೆ ಬಹಳಷ್ಟು ಉಪಯುಕ್ತವಾಯಿತು. ಗ್ರಾಹಕರ ಅಪಾರ ಬೇಡಿಕೆಯ ಮೇರೆಗೆ, ಮಾರ್ಚ್ 28ರಂದು ಕಾಂಪೋಸ್ಟ್ ತಯಾರಿಕೆಯ ಸುಧಾರಿತ ವಿಧಾನಗಳ ಬಗ್ಗೆ ಎರಡನೇ ಮತ್ತು ಮೂರನೇ ಅವಧಿಯ ಕಾರ್ಯಾಗಾರಗಳನ್ನು ನಡೆಸಲಾಯಿತು.

ಇದೇ ರೀತಿ, ಏಪ್ರಿಲ್ 4ರಂದು ಪಕ್ಷಿ ತಜ್ಞ ಶ್ರೀಧರ ತುಮರಿ ಅವರು ಪಕ್ಷಿಲೋಕದ ವಿಸ್ಮಯಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಹದ್ದುಗಳಂತಹ ಪಕ್ಷಿಗಳು ಪರಿಸರದ ಮೇಲೆ ಬೀರುವ ಧನಾತ್ಮಕ ಪ್ರಭಾವದ ಬಗ್ಗೆ ಅವರು ನೀಡಿದ ಮಾಹಿತಿ ಸಭಿಕರಿಗೆ ಹೊಸ ಆಯಾಮವನ್ನು ಒದಗಿಸಿತು. ನಂತರ, ಏಪ್ರಿಲ್ 11ರಂದು ಬ್ರಿಕ್ಸ್ ಸಿಇಒ ರವೀಶ್ ಭಟ್ ಅವರು ಶೀಕಾಕಾಯಿ, ಶ್ರೀಗಂಧ, ಬೇವಿನ ಎಲೆಗಳು ಹಾಗೂ ಅರಿಶಿಣದಂತಹ ನೈಸರ್ಗಿಕ ಉತ್ಪನ್ನಗಳಿಂದ ತಯಾರಿಸಿದ ಸಾಬೂನುಗಳ ಮಹತ್ವ ಮತ್ತು ತ್ವಚೆಯ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಮುಂದುವರಿದ ಭಾಗವಾಗಿ, ಏಪ್ರಿಲ್ 18ರಂದು ಮನೆ ಮತ್ತು ತಾರಸಿ ತೋಟಗಳಿಗೆ ಪರಿಸರ ಪೂರಕವಾಗಿ ನೀರುಣಿಸುವ ತಾಂತ್ರಿಕತೆಗಳ ಕುರಿತು ರಾಜೇಂದ್ರ ಹೆಗಡೆಯವರು ತರಬೇತಿ ನೀಡಿದರು. ಹೀಗೆ ವೈವಿಧ್ಯಮಯ ವಿಷಯಗಳೊಂದಿಗೆ ನಡೆಯುತ್ತಿರುವ ಈ ಕಾರ್ಯಾಗಾರಗಳು ಪರಿಸರಪ್ರಿಯರಿಗೆ ಜ್ಞಾನದ ಭಂಡಾರವಾಗಿವೆ. ಹಸಿರು ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಈ ಪಯಣದಲ್ಲಿ ನೀವೆಲ್ಲರೂ ಪಾಲ್ಗೊಳ್ಳಬೇಕೆಂದು ಅದಮ್ಯ ಚೇತನ ಸಂಸ್ಥೆಯು ಸಾದರ ಆಹ್ವಾನ ನೀಡುತ್ತದೆ.

## ಸಾಮಾನ್ಯ ಬೂದು ಗಮಟೇಹಕ್ಕಿ / ಬೂದು ಮಂಗಟ್ಟೆ

ಪಕ್ಷಿಗಳ ವಿಸ್ಮಯ ಲೋಕ







ಗಾತ್ರದಲ್ಲಿ ಗರುಡನಷ್ಟಿರುವುದು. ನಾಜೂಕಿಲ್ಲದ ಕಂದು ಬೂದು ಹಕ್ಕಿ. ಬಲವಾಗಿ ಕಮಾನಾಗಿ ಬಾಗಿರುವ ಉದ್ದ ಕಪ್ಪು ಕೊಕ್ಕು, ಅದರ ಮೇಲೆ ತಲೆಗೆ ಹೋಲಿಸಿದರೆ ಎರಡೂವರೆ ಪಟ್ಟು ಜಾಸ್ತಿ, ವಿಚಿತ್ರವಾದ ಅದರ ಮೇಲೆ ಇನ್ನೊಂದು ಕೊಕ್ಕು, ಕಣ್ಣುಗಳ ಸುತ್ತ ಬೋಳು ಚರ್ಮ, ಬಾಲದ ಉದ್ದನೆಯ ಪುಕ್ಕ ಕಪ್ಪು ಬಿಳಿಪು ಅಂಚು. ಹಾರುವಾಗ ಬಣ್ಣ ಭಿನ್ನವಾಗಿ ತೋರುವುದು. ಗಿಡ್ಡ ಕಾಲು, ಮುಂದಿನ ಮೂರು ಬೆರಳು ತುದಿಕೂಡಿ ಅಗಲವಾಗಿರುವುದು. ಮರಕ್ಕೆ ಉಗುರನ್ನು ಒತ್ತಿ ಹಿಡಿದು ಗಟ್ಟಿಯಾಗಿ ಕುಳಿತು ಗುಟುಕು ಕೊಡಲು ಅನುಕೂಲವಾಗುವುದು. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಹೆಣ್ಣುಹಕ್ಕಿಗೆ ಮೇಲ್ಕೊಕ್ಕು ಟೊಪ್ಪಿಗೆ ಸ್ವಲ್ಪ ಚಿಕ್ಕದು. ಎಳೆಯ ಹಕ್ಕಿ ಪ್ರಾಯದಂತೆ ಕಾಣುವುದು. ಆದರೆ ಮೇಲ್ಕೊಕ್ಕು ಇರುವುದಿಲ್ಲ."

**-ಶ್ರೀಧರ್ ತುಮರಿ**

## ಅನಂತ ಪ್ರೇರಣಾ ಕೇಂದ್ರದಲ್ಲಿ ಅರಳಿದ ಸ್ತ್ರೀಶಕ್ತಿ 'ಗ್ರಾಮ ಚೇತನ' ತರಬೇತಿ ಯಶಸ್ವಿ




ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ 2026 ರ ಏಪ್ರಿಲ್ 09 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಸದಸ್ಯೆಯರು ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ನೇತೃತ್ವ ವಿಕಸನಕ್ಕಾಗಿ ನಡೆದ "ಗ್ರಾಮ ಚೇತನ" ಶಿಬಿರ ಯಶಸ್ವಿಯಾಗಿ ಜರುಗಿತು. ವಿವಿಧ ಗ್ರಾಮಗಳಿಂದ 45 ಮಹಿಳೆಯರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ತರಬೇತಿಯ ಮೊದಲ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಕೀರ್ತಿವತಿ ಅವರು ಗ್ರಾಮೀಣ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ, ಸ್ವ-ಉದ್ಯೋಗದ ಅವಕಾಶಗಳು, ಪರಿಸರ ಸಂರಕ್ಷಣೆ ಹಾಗೂ ಸಮಾಜದಲ್ಲಿ ಸಾಮರಸ್ಯ ಕಾಪಾಡುವ ಕುರಿತು ವಿಸ್ತೃತವಾಗಿ ಮಾಹಿತಿ ನೀಡಿದರು.

ಎರಡನೇ ಅವಧಿಯಲ್ಲಿ ಶ್ರೀ ಜಗದೀಶ ಬಾಪಟ್ ಅವರು ಎರೆಹುಳ ಗೊಬ್ಬರ ತಯಾರಿಕೆಯ ವೈಜ್ಞಾನಿಕ ವಿಧಾನಗಳು ಹಾಗೂ ಸಿದ್ಧಪಡಿಸಿದ ಗೊಬ್ಬರಕ್ಕೆ ಮಾರುಕಟ್ಟೆ ಕಂಡುಕೊಳ್ಳುವ ಕೌಶಲ್ಯಗಳ ಬಗ್ಗೆ ತರಬೇತಿ ನೀಡಿದರು. ಭಾಗವಹಿಸಿದ ಮಹಿಳೆಯರು ಅತ್ಯಂತ ಉತ್ಸಾಹದಿಂದ ತರಬೇತಿ ಪಡೆದರು. ಶಿರಸಿಯಿಂದ ಆಗಮಿಸಿದ್ದ ಶ್ರೀ ನಾರಾಯಣ ಹೆಗಡೆ ಅವರು ಹಾಗೂ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶಿಬಿರಾರ್ಥಿಗಳು ಅನಂತ ಪ್ರೇರಣಾ ಕೇಂದ್ರದ ಚಟುವಟಿಕೆಗಳನ್ನು ವೀಕ್ಷಿಸಿ, ತಮ್ಮ ಸಕಾರಾತ್ಮಕ ಅಭಿಪ್ರಾಯಗಳನ್ನು ದಾಖಲಿಸಿದರು.

**ಹಸಿರು ಭಾನುವಾರ :** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 530 ರಿಂದ 533ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 530, 531, 532, ಮತ್ತು 533 ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ, ಕಗ್ಗಲಿಪುರ ಉತ್ತರಿ ಶಂಕರ ಮಠದ ಆವರಣ, ಬಸವನಗುಡಿಯ ಬಿ ಪಿ ವಾಡಿಯಾ ರಸ್ತೆಯ ಅನಂತವನದ ಆವರಣ, ಕಗ್ಗಲಿಪುರ ಉತ್ತರಿ ಶಂಕರ ಮಠದ ಆವರಣ, ರಾಮೋಹಳ್ಳಿಯ ಮುಕ್ತಿನಾಗ ದೇವಸ್ಥಾನದ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಇತರರು ಭಾಗವಹಿಸಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, 36 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

# ತಿಂಗಳ ವರದಿ

( ಮಾರ್ಚ್ -ಏಪ್ರಿಲ್ ) 2026)

## ಅನಂತ ಪ್ರೇರಣಾ ಕೇಂದ್ರದಲ್ಲಿ "ಸ್ಫೂರ್ತಿ" ಉಚಿತ ಬೇಸಿಗೆ ಶಿಬಿರ ಯಶಸ್ವಿ

ಅನಂತ ಪ್ರೇರಣಾ ಕೇಂದ್ರ ಹಾಗೂ ಸುನಿಧಿ ಕಲಾ ಸೌರಭ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗಾಗಿ ಆಯೋಜಿಸಲಾಗಿದ್ದ ಐದು ದಿನಗಳ "ಸ್ಫೂರ್ತಿ" ಉಚಿತ ಬೇಸಿಗೆ ಶಿಬಿರವು ದಿನಾಂಕ 8-04-2026 ರಂದು ಯಶಸ್ವಿಯಾಗಿ ಜರುಗಿತು. ಏಪ್ರಿಲ್ 3 ರಿಂದ ಪ್ರಾರಂಭವಾದ ಈ ಶಿಬಿರದಲ್ಲಿ ನಗರದ ವಿವಿಧ ಬಡಾವಣೆಗಳ ಸುಮಾರು 70ಕ್ಕೂ ಹೆಚ್ಚು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ತಮ್ಮ ರಜಾ ದಿನಗಳನ್ನು ಸೃಜನಾತ್ಮಕವಾಗಿ ಕಳೆದರು.

ಐದು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಮಕ್ಕಳಿಗೆ ಕೇವಲ ಕಲೆಯಷ್ಟೇ ಅಲ್ಲದೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಪ್ರಾರ್ಥನೆ, ನೀತಿ ಪಾಠಗಳು, ಜಾನಪದ ನೃತ್ಯ ಹಾಗೂ ಮೋಜು ಗಣಿತದಂತಹ ವೈವಿಧ್ಯಮಯ ವಿಷಯಗಳನ್ನು ಕಲಿಸಲಾಯಿತು. ಇದರೊಂದಿಗೆ ಪೇಪರ್ ಕಪ್ ತಯಾರಿಕೆ, ಪೆನ್ನು ಸ್ಟ್ಯಾಂಡ್ ಮತ್ತು ಆಯಿಲ್ ಪೇಂಟಿಂಗ್‌ನಂತಹ ಕರಕುಶಲ ಕಲೆಗಳಲ್ಲಿ ಮಕ್ಕಳಿಗೆ ತರಬೇತಿ ನೀಡುವ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ಪ್ರೋತ್ಸಾಹಿಸಲಾಯಿತು.



ರಂಗಾಯಣದ ಮಾಜಿ ನಿರ್ದೇಶಕರಾದ ಶ್ರೀ ಸುಭಾಷ್ ನರೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ವಿದ್ಯಾ ನಾಡಿಗೇರ, ಶ್ರೀಮತಿ ಸ್ವಾತಿ ಪಟ್ಟೇದ ಹಾಗೂ ಶ್ರೀಮತಿ ಇಂದುಮತಿ ಅವರು ಆಗಮಿಸಿದ್ದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ವಿದ್ಯಾ ನಾಡಿಗೇರ ಅವರು, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವಲ್ಲಿ ಇಂತಹ ಶಿಬಿರಗಳ ಪಾತ್ರ ಮಹತ್ತರವಾದುದು ಎಂದು ಅಭಿಪ್ರಾಯಪಟ್ಟರು. ಇಂತಹ ಚಟುವಟಿಕೆಗಳು ಮಕ್ಕಳಲ್ಲಿ ಆತ್ಮಸ್ಥೈರ್ಯ ಮತ್ತು ದಿಟ್ಟತನವನ್ನು ಬೆಳೆಸುವುದಲ್ಲದೆ, ಅವರಲ್ಲಿರುವ ವೇದಿಕೆಯ ಭಯವನ್ನು ಹೋಗಲಾಡಿಸಲು ಸಹಕಾರಿಯಾಗಿವೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುತ್ತಿರುವ ಸಂಸ್ಥೆಗಳ ಸೇವೆಯನ್ನು ಶ್ಲಾಘಿಸಿ, ಕಿಶೋರಾವಸ್ಥೆಯ ಮಕ್ಕಳನ್ನು ಪೋಷಕರು ಹೇಗೆ ಪ್ರೀತಿ ಮತ್ತು ಜವಾಬ್ದಾರಿಯಿಂದ ನಿಭಾಯಿಸಬೇಕು ಎಂಬ ಬಗ್ಗೆ ಉಪಯುಕ್ತ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಸುಮಾರು 80ಕ್ಕೂ ಹೆಚ್ಚು ಪೋಷಕರು ಉಪಸ್ಥಿತರಿದ್ದು, ತಮ್ಮ ಮಕ್ಕಳು ಶಿಬಿರದಲ್ಲಿ ಕಲಿತ ಕಲೆ ಮತ್ತು ಶಿಸ್ತನ್ನು ಕಂಡು ಸಂತಸ ವ್ಯಕ್ತಪಡಿಸಿದರು. ಶ್ರೀಮತಿ ವೀಣಾ ಅಠವಲೆ ಅವರು ಕಳೆದ ಐದು ದಿನಗಳ ಶಿಬಿರದ ಹಾದಿಯನ್ನು ಸವಿಸ್ತಾರವಾಗಿ ವಿವರಿಸಿ, ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.ಒಟ್ಟಾರೆಯಾಗಿ, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಈ ಶಿಬಿರವು ಪೋಷಕರ ಮತ್ತು ಮಕ್ಕಳ ಮೆಚ್ಚುಗೆಗೆ ಪಾತ್ರವಾಗುವ ಮೂಲಕ ಅರ್ಥಪೂರ್ಣವಾಗಿ ಮುಕ್ತಾಯಗೊಂಡಿತು.


ಅನಂತಪಥ

Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರ ಸಂಪುಟ )




ಏಪ್ರಿಲ್ 13 ರಂದು 'ದಿ ಸತ್ಸಂಗ್ ಫೌಂಡೇಶನ್' ಆಯೋಜಿಸಿದ್ದ ಶ್ರೀ ಎಂ ಅವರ 'ಉಪನಿಷತ್ ಮತ್ತು ಜೆ. ಕೃಷ್ಣಮೂರ್ತಿ' ಪುಸ್ತಕ ಲೋಕಾರ್ಪಣಾ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಿದ್ದರು.



ಬಾಗಲಕೋಟೆಯ ಚಿಮ್ಮಡದಲ್ಲಿ ಏಪ್ರಿಲ್ 02 ರಂದು ನಡೆದ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅವರಿಗೆ ರಾಜ್ಯಮಟ್ಟದ 'ಅಕ್ಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.



ಶ್ರೀಮದ್ಭಗವದ್ಗೀತಾ ಶ್ಲೋಕ ಪಠಣ ಕಾರ್ಯಕ್ರಮವು ಪ್ರತಿ ಗುರುವಾರ ಬೆಂಗಳೂರಿನ ಅನಂತ ಪ್ರೇರಣಾ ಕೇಂದ್ರದಲ್ಲಿ ನಿರಂತರವಾಗಿ ನಡೆಯುತ್ತಿದೆ.







ಅನಂತ ಪ್ರೇರಣಾ ಕೇಂದ್ರ ಮತ್ತು ಸುನಿಧಿ ಕಲಾ ಸೌರಭದ ಸಂಯುಕ್ತ ಆಶ್ರಯದಲ್ಲಿ ನಡೆದ 'ಸ್ಫೂರ್ತಿ' ಉಚಿತ ಬೇಸಿಗೆ ಶಿಬಿರವು ಮಕ್ಕಳ ಪ್ರತಿಭೆಗೆ ವೇದಿಕೆಯಾಗಿ ಯಶಸ್ವಿಯಾಗಿ ಸಂಪನ್ನಗೊಂಡಿತು. ಕಲೆ, ಸಂಸ್ಕೃತಿ ಮತ್ತು ಸೃಜನಶೀಲ ಕೌಶಲಗಳ ಸಂಗಮವೇ ಈ ಶಿಬಿರ; ಮಕ್ಕಳ ಕಲಿಕಾ ಪಯಣದ ಸುಂದರ ದೃಶ್ಯಗಳು




3 ನೇಯ ಹಸಿರು ಭಾನುವಾರ - ವಿಜಯಪುರ, ವಜ್ರಹನುಮಾನ ಬಡಾವಣೆಯ ಪ್ರಮೋದಾತ್ಮಕ ಗುರುಕುಲದಲ್ಲಿ ತುಳಸಿ ಸಸಿ ಹಚ್ಚುವ ಮೂಲಕ ವಿಜೃಂಭಣೆಯಿಂದ ನಡೆಯಿತು.




ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ '537ನೇ ಹಸಿರು ಭಾನುವಾರ' ಕಾರ್ಯಕ್ರಮವು ಏಪ್ರಲ್ 12 ರಂದು ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯ ಆವರಣದಲ್ಲಿ ಯಶಸ್ವಿಯಾಗಿ ನೆರವೇರಿತು.